# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

**ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 23-03-2021 ಪ್ರಶ್ನೆ ಸಂಖ್ಯೆ : 1647(1897)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 23-03-2021

ಉತ್ತರಿಸುವ ಸಚಿವರು: ಮಾನ್ಯ ಸಹಕಾರ ಸಚಿವರು

ವಿಷಯ : ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಕುರಿತು

(ಅ) ಬ್ರಹ್ಮಾವರ ಸಕ್ಕರೆ ಕಾರ್ಖಾನೆಯು ಸ್ಥಗಿತಗೊಳ್ಳುವ ಮೊದಲು ಮತ್ತು ಸ್ಥಗಿತಗೊಂಡ ನಂತರ ಪಡೆದ ಸಾಲದ ಮೊತ್ತವೆಷ್ಟು;ಯಾವ ಯಾವ ಮೂಲಗಳಿಂದ ಮತ್ತು ಯಾವಾಗ ಸಾಲವನ್ನು ಪಡೆಯಲಾಗಿದೆ; ಯಾವ ಕಾರಣಕ್ಕಾಗಿ ಸಾಲವನ್ನು ಪಡೆಯಲಾಗಿದೆ; ಈಗ ಅವುಗಳ ಅಸಲು ಮತ್ತು ಬಡ್ಡಿಯ ಒಟ್ಟು ಮೊತ್ತವೆಷ್ಟು; (ಸಾಲದ ಮೊತ್ತ, ವರ್ಷ, ಸಂಸ್ಥೆ ಮತ್ತು ಸಾಲದ ಉದ್ದೇಶವಾರು ಮಾಹಿತಿಯನ್ನು ನೀಡುವುದು )

(ಆ) ಬ್ರಹ್ಮಾವರ ಸಕ್ಕರೆ ಕಾರ್ಖಾನೆಯು ಸ್ಥಗಿತಗೊಳ್ಳುವ ಮೊದಲು ಮತ್ತು ಸ್ಥಗಿತಗೊಂಡ ನಂತರ ಸರ್ಕಾರದ ವಿವಿಧ ಇಲಾಖೆಗಳಿಗೆ ಪಾವತಿಸಲು ಬಾಕಿಯಿರುವ ಮೊತ್ತವೆಷ್ಟು; ಅವುಗಳಲ್ಲಿ ಅಸಲು ಮತ್ತು ಬಡ್ಡಿ ಮೊತ್ತವೆಷ್ಟು;(ಇಲಾಖಾವಾರು ಮಾಹಿತಿ ನೀಡುವುದು)

(ಇ) ಬ್ರಹ್ಮಾವರ ಸಕ್ಕರೆ ಕಾರ್ಖಾನೆಯು ಸ್ಥಗಿತಗೊಳ್ಳುವ ಮೊದಲು ಮತ್ತು ಸ್ಥಗಿತಗೊಂಡ ನಂತರ ರೈತರಿಗೆ ಪಾವತಿಸಲು ಬಾಕಿಯಿರುವ ಮೊತ್ತವೆಷ್ಟು;

(ಈ) ಕಾರ್ಖಾನೆಯ ಪುನಶ್ಚೇತನದ ದೃಷ್ಟಿಯಿಂದ ಈ ಸಾಲವನ್ನು ಮನ್ನಾ ಮಾಡುವ ಉದ್ದೇಶ ಸರ್ಕಾರದ ಮುಂದಿದೆಯೇ; ಈ ಕಾರ್ಖಾನೆಯ ಪುನಶ್ಚೇತನದ ಬಗ್ಗೆ ಸರ್ಕಾರದ ಕ್ರಮವೇನು?